
## ಎತ್ತಿದ ಕೈ...



ಮೊಮ್ಮಗ ವೇದಾಂತನನ್ನು ಮೂರನೇ ತರಗತಿಗೆ ಪುತ್ತೂರಿನ ಆಂಗ್ಲ ಮಾಧ್ಯಮ ಶಾಲೆಗೆ ಸೇರಿಸಿದ್ದೆವು. ಅವನಿಗೆ ಇಂಗ್ಲಿಷ್–ಹಿಂದಿ ಬಿಟ್ಟರೆ ಬೇರೆ ಭಾಷೆ ಬರುತ್ತಿರಲಿಲ್ಲ. ಈ ಶಾಲೆಯಲ್ಲಿ ಕನ್ನಡ ಕಡ್ಡಾಯ. ಹೇಗೊ ಕಷ್ಟ ಪಟ್ಟು ಕನ್ನಡ ಕಲಿತು ಮೊದಲ ತಿಂಗಳ ಪರೀಕ್ಷೆಯಲ್ಲಿ 20ಕ್ಕೆ 9 ಅಂಕ ಪಡೆದು ಪಾಸಾದ. ಕೊನೆಗೆ ನಮ್ಮ ಪುಟ್ಟನ ಉತ್ತರ ಪತ್ರಿಕೆ ನೋಡುವ ಭಾಗ್ಯ ನಮ್ಮದಾಯಿತು. ಅಲ್ಲಿ ಒಂದು ಉತ್ತರಕ್ಕೆ ಕನ್ನಡ ಮೇಷ್ಟ್ರು ಕೆಂಪು ಗೆರೆ ಎಳೆದದ್ದು ನೋಡಿ ಗಕ್ಕನೆ ಕಣ್ಣು ಆ ಉತ್ತರವನ್ನೇ ಹಿಡಿದುಕೊಂಡಿತು. 'ಎತ್ತಿದ ಕೈ' ವಾಕ್ಯವನ್ನಾಗಿ ಮಾಡಿ ಎಂದಿದ್ದ ಪ್ರಶ್ನೆಗೆ ನಮ್ಮ ಪುಟ್ಟ ಉತ್ತರಿಸಿದ್ದ, 'ರಾಜುವಿನದು ಕಾಮದಲ್ಲಿ ಎತ್ತಿದ ಕೈ'. ನನಗಂತೂ ನಗು ತಡೆಯಲಾಗಲಿಲ್ಲ. ಹಿಂದಿಯಲ್ಲಿ ಕಾಮ್ ಎಂದರೆ ಕೆಲಸ, ಅದಕ್ಕೆ ಕನ್ನಡ ಪದ ಗೊತ್ತಾಗದೇ ಹಿಂದಿಯಲ್ಲೇ ಬರೆದಿದ್ದಾನೆ ಎಂದು ವಿವರಿಸಿದಾಗ ಮೇಷ್ಟ್ರು ಸಮಾಧಾನಗೊಂಡರು.

**ರಾಜಲಕ್ಷ್ಮಿ ವಿ. ಶೆಣೈ**



ಚಿತ್ರಗಳು: ಗಣೇಶ ಆಚಾರ್ಯ

## ಹೊಸ ರಿಬ್ಬನ್

ಬ್ಯಾಂಕಿನ ಗ್ರಾಹಕರೊಬ್ಬರು ಪುಟ್ಟ ಹುಡುಗಿಯೊಂದಿಗೆ ಬಂದಿದ್ದರು. ಹೊಸ ಲಂಗ, ಎರಡು ಜಡೆ, ಅವಕ್ಕೆ ಮಿರುಗಿವ ಹೊಸ ರಿಬ್ಬನ್, ಬಳೆ... ಆಕೆಯ ಶೃಂಗಾರ ನೋಡಬೇಕಿತ್ತು! 'ಏನು ವಿಶೇಷ ಪುಟ್ಟಿ' ಎಂದು ಕೇಳಿದೆ. 'ಶಾಲೆಯಲ್ಲಿ ಸರಸ್ವತಿ ಪೂಜೆ' ಎಂದಳು. ಅವಳ ತಂದೆ ಸ್ಕಾಲರ್‌ಶಿಪ್ ಹಣ ಜಮಾ ಆಗಿದ್ದನ್ನು ಶಾಲೆಗೆ ತೋರಿಸಲು ಮಗಳ ಪಾಸ್‌ಬುಕ್ ಎಂಟ್ರಿ ಮಾಡಿ ಕೊಡುವಂತೆ ಕೇಳಿದ್ದರು. ಪಾಸ್‌ಬುಕ್ ಪ್ರಿಂಟರ್‌ಗೆ ಹಾಕಿದಾಗ ಪ್ರಿಂಟರ್‌ನ ರಿಬ್ಬನ್ ತುಂಡಾಗಿದ್ದು ಗಮನಕ್ಕೆ ಬಂತು. 'ರಿಬ್ಬನ್ ತುಂಡಾಗಿದೆ. ಎಂಟ್ರಿ ಮಾಡೋಕೆ ಆಗಲ್ಲ' ಎಂದೆ. ಚೂಟಿ ಹುಡುಗಿ ತಟ್ಟನೇ ತನ್ನ ಜಡೆಗೆ ಕೈ ಹಾಕಿಕೊಳ್ಳುತ್ತ, 'ಇಗೊಳ್ಳಿ, ಹೊಸಾ ರಿಬ್ಬನ್... ಇದನ್ನೇ ಹಾಕಿ' ಎಂದಳು.

**ಪೂರ್ಣಿಮಾ ಗುರುದೇವ ಭಂಡಾರ್ಕರ್**